ಆ) ನೀಲಗಿರಿ ತೋಪುಗಳನ್ನು ಬೆಳೆಸುವ ಕಾರ್ಯಕ್ರಮದಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ತೊಂದರೆಯನ್ನು ಸರಿಪಡಿಸಲು ತೆಗೆದುಕೊಂಡ ಕ್ರಮಗಳೇನು?

ಈ) ರಾಜ್ಯದಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ನೀಲಗಿರಿ ಕಾಡನ್ನು ಬೆಳೆಸಲಾಗಿದೆ ಹಾಗೂ ಬೆಳೆಸುವ ಉದ್ದೇಶವಾದರು ಏನು?

ಶ್ರೀ ಕೆ. ಹೆಚ್. ರಂಗನಾಥ್ (ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು)

ಆ) ಇಡೀ ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ನಿರ್ದಿಷ್ಟವಾಗಿ ಮೈಸೂರು ಜಿಲ್ಲೆಯಲ್ಲಿ ಅರಣ್ಯಗಳು ನಾಶವಾಗುತ್ತಿಲ್ಲ.

ಆ) ನೀಲಗಿರಿ ನೆಡುತೋಪುಗಳು ಬೆಳೆಸುವುದರಿಂದ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆ ಆಗಿರುವ ಬಗ್ಗೆ ತಿಳಿದು ಬಂದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ರಾಜ್ಯದಲ್ಲಿ ಇದುವರೆಗೆ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮಕ್ಕೆ ಹಸ್ತಾಂತರಿಸಿರುವ ಮತ್ತು ಅವರು ಬೆಳೆಸಿರುವ ನೆಡುತೋಪುಗಳೂ ಸೇರಿದಂತೆ ೧,೩೧,೫೨೨ ಹೆಕ್ಟೇರು ಪ್ರದೇಶದಲ್ಲಿ ನೀಲಗಿರಿ ನೆಡುತೋಪುಗಳನ್ನು ಬೆಳೆಸಲಾಗಿದೆ. ರಾಜ್ಯವು ಉರುವಲು ಕಟ್ಟಿಗೆಯ ಮತ್ತು ಕಾಗದ ಮತ್ತು ಪಲ್ಪ್ ಕೈಗಾರಿಕೆಗಳಿಗೆ ಕಚ್ಚಾ ವಸ್ತುವಿನ ಅಭಾವ ಎದುರಿಸುತ್ತಿರುವುದರಿಂದ ಬೇಗ ಬೆಳೆಯುವ ಜಾತಿಯ ಮರಗಳನ್ನು ಉರುವಲು ಕಟ್ಟಿಗೆಯ ಹಾಗೂ ಕಚ್ಚಾವಸ್ತುಗಳ ಪೂರೈಕೆಗಾಗಿ ಬೆಳೆಸಬೇಕಾಗಿರುವುದು. ನೀಲಗಿರಿಯು ಬೇಗ ಬೆಳೆಯುವ ಜಾತಿಯ ಮರಗಳಿಗೆ ಸೇರಿರುವುದರಿಂದ ಇದನ್ನು ಬೆಳೆಸಲಾಗುತ್ತಿದೆ.

ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಸರ್ಕಾರಿ ಬಾಲಕಿಯರ ಪ್ರೌಢಶಾಲೆಗಳ ಬಗ್ಗೆ

೨೬೭. ಶ್ರೀ ಬಿ. ಹೆಚ್. ಯಂಕಾನಾಯ್ಕ (ಹರಪನಹಳ್ಳಿ)—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಸರ್ಕಾರಿ ಬಾಲಕಿಯರ ಪ್ರೌಢಶಾಲೆಗಳ ಸಂಖ್ಯೆ ಎಷ್ಟು?

ಆ) ಹರಪನಹಳ್ಳಿಯಲ್ಲಿರುವ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯು ಕಟ್ಟಡ ತುಂಬಾ ಚಿಕ್ಕದಾಗಿದ್ದು ವಿದ್ಯಾರ್ಥಿನಿಯರಿಗೆ ಮತ್ತು ಪ್ರಾಧ್ಯಾಪಕರುಗಳಿಗೆ ಸ್ಥಳ ಅಭಾವದಿಂದ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಕಟ್ಟಡ ವಿಸ್ತರಿಸುವ ಬಗ್ಗೆ ಸರ್ಕಾರದವರು ಕೂಡಲೇ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವರೇ?

ಶ್ರೀ ಕೆ. ಹೆಚ್. ರಂಗನಾಥ (ಕೃಷಿ ಮತ್ತು ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು)

ಅ) ಒಂದು

ಆ) ಬಂದಿತ್ತು

ಇ) ಕ್ರಮ ಕೈಗೊಳ್ಳಲಾಗಿದೆ. ಒಟ್ಟು ೨.೫೦ ಲಕ್ಷ ರೂಗಳ ಅಂದಾಜನ್ನು ಅದರಲ್ಲಿ ೧.೫೦ಲಕ್ಷ ರೂಗಳನ್ನು ೧೯೮೬-೮೭ನೇ ಸಾಲಿನಲ್ಲಿಯೇ ಬಿಡುಗಡೆ ಮಾಡಿದ್ದು ೪ ತರಗತಿ ಕೊಠಡಿಗಳನ್ನು ಮತ್ತು ೨ ಕಚೇರಿ ಕೊಠಡಿಗಳನ್ನು ನಿರ್ಮಿಸಲಾಗಿದೆ. ಇದು ೧೯೮೯ರಲ್ಲಿ ಮುಗಿದಿದ್ದು ಸ್ಥಳಾವಕಾಶದ ಪೂರೈಕೆ ಮಾಡಲಾಗಿದೆ.

ಈ ಶಾಲೆಗೆ ಕಾಂಪೌಂಡ್ ಮಾತ್ರ ಹಾಕಿಸುವುದು ಉಳಿದಿದೆ.

೧೯೮೭ರ ನಂತರ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣದ ನಿರ್ವಹಣೆ ಜಿಲ್ಲಾ ಪರಿಷತ್ತುಗಳ ವ್ಯಾಪ್ತಿಗೆ ಬರುವ ಕಾರಣ ಬಳ್ಳಾರಿ ಜಿಲ್ಲಾ ಪರಿಷತ್ತನ್ನು ಈ ಕಾರ್ಯಕ್ರಮಕ್ಕಾಗಿ ಹಣ ಒದಗಿಸಬೇಕೆಂದು ಕೋರಲಾಗಿದೆ.